standard chartered

# ವೈಯಕ್ತಿಕ ಸಾಲ ಅತ್ಯಂತ ಪ್ರಮುಖ ನಿಯಮಗಳು ಮತ್ತು ಷರತ್ತುಗಳು

1) ಈ ದಾಖಲೆಯು ಸ್ಟ್ಯಾಂಡರ್ಡ್ ಚಾರ್ಟರ್ಡ್ ಬ್ಯಾಂಕಿನ (ಅಬ್ಯಾಂಕುಅ) ವೈಯಕ್ತಿಕ ಸಾಲಕ್ಕೆ ಸಂಬಂಧಿಸಿದಂತೆ ನಿಯಮಗಳು ಮತ್ತು ಷರತ್ತುಗಳನ್ನು ನಿರೂಪಿಸುತ್ತದೆ ವೈಯಕ್ತಿಕ ಸಾಲದ ನಿಯಮಗಳು, ಬ್ಯಾಂಕಿನ ವೈಯಕ್ತಿಕ ಸಾಲಗಳ ನಿಬಂಧನೆಗಳನ್ನು ನೋಡಿಕೊಳ್ಳುವ ಈ ಅತ್ಯಂತ ಪ್ರಮುಖ ನಿಯಮಗಳು ಮತ್ತು ಷರತ್ತುಗಳೊಂದಿಗೆ (ಬ್ಯಾಂಕಿನ ವೆಬ್ ಸೈಟಿನಲ್ಲಿ https://www.sc.com/global/av/in-scb-pl-terms-n-Conditions.pdf ನಲ್ಲಿಯೂ ಲಭ್ಯ), ಗ್ರಾಹಕ ನಿಯಮಗಳು (ಬ್ಯಾಂಕಿನ ವೆಬ್ ಸೈಟನಲ್ಲಿ https://www.sc.com/in/assets/pws/pdf/Client-Terms-and-condition) ನಲ್ಲಿಯೂ ಲಭ್ಯ. ಬ್ಯಾಂಕಿಗೆ ವೈಯಕ್ತಿಕ ಸಾಲಕ್ಕೆ ಅರ್ಜಿ ಸಲ್ಲಿಸುವ ಮೊದಲು ಇದನ್ನು ಓದಿದ್ದಾನೆ ಮತ್ತು ಅರ್ಥ ಮಾಡಿದ್ದಾನೆ ಎಂಬುದಾಗಿ ಸಾಲಗಾರನು ಒಪ್ಪಿದ್ದಾನೆ. ಪ್ರಮುಖ ಪದಗಳನ್ನು ಸಹ ಬ್ಯಾಂಕಿನ ಪ್ರತಿನಿಧಿಯು ಸಾಲಗಾರನಿಗೆ ವಿವರಿಸಿದ್ದಾನೆ. ಪ್ರತಿ ಸಾಲಗಾರನಿಗೆ ಅನನ್ಯವೆನಿಸುವ ಪ್ರಮುಖ ಮಾಹಿತಿ ದಾಖಲೆಯನ್ನು ಬ್ಯಾಂಕು ಪ್ರತ್ಯೇಕವಾಗಿ ಒದಗಿಸುತ್ತದೆ.

2) ಸಾಲಗಾರನ ಯಾವುದೇ ಮಾಹಿತಿ ಅಥವಾ ಬ್ಯಾಂಕು ಸೂಕ್ತವೆಂದು ಭಾವಿಸುವ ಯಾವುದೇ ವ್ಯಕ್ತಿಯಿಂದ (ಪ್ರಾಧಿಕಾರ ಅಥವಾ ಸಾಲದ ರೆಫರೆನ್ಸ್ ಅಥವಾ ರೇಟಿಂಗ್ ಏಜೆನ್ಸಿ ಇತ್ಯಾದಿ) ಸಾಲಗಾರನ ಸಾಲದ ಸ್ಥಿತಿಗತಿಯನ್ನು ಪರಿಶೀಲಿಸಲು ಸಾಲಗಾರನು ಅನುಮತಿ ನೀಡುತ್ತಾನೆ.

3) ಸಾಲಗಾರನು ವೈಯಕ್ತಿಕ ಸಾಲವನ್ನು ಸಮೀಕರಿಸಿದ ಮಾಸಿಕ ಕಂತುಗಳು (ಇ.ಎಂ.ಐ.)ಗಳಲ್ಲಿ ಪಾವತಿಸಬಹುದು ಮತ್ತು ಇ.ಎಂ.ಐ. ಮೊತ್ತದ ಮರುಪಾವತಿಗಾಗಿ ಎಲೆಕ್ಟ್ರಾನಿಕ್ ಕ್ಲಿಯರಿಂಗ್ ಸರ್ವಿಸಸ್ (ಇ.ಸಿ.ಎಸ್.) ಅಥವಾ ಸ್ಟ್ಯಾಂಡಿಂಗ್ ಇನ್ಸ್ ಟ್ರಕ್ಷನ್ ಅನ್ನು ಆರಿಸಬಹುದು. ಪಾವತಿಲೋಪ ಉಂಟಾದಲ್ಲಿ, ಬಾಕಿ ಇರುವ ಸಾಲದ ವಸೂಲಾತಿಗಾಗಿ ಇ.ಸಿ.ಎಸ್. / ಸ್ಟ್ಯಾಂಡಿಂಗ್ ಇನ್ಸ್ ಟ್ರಕ್ಷನ್ ಅನ್ನು ಬ್ಯಾಂಕು ಪ್ರಸ್ತುತಿಪಡಿಸಬಹುದು.

4) ಒಂದು ವೇಳೆ ವೈಯಕ್ತಿಕ ಸಾಲವನ್ನು ಬ್ಯಾಂಕು ನಿರಾಕರಿಸಿದರೂ, ಯಾವುದೇ ಕೆ.ವೈ.ಸಿ. ದಾಖಲೆ ಸೇರಿದಂತೆ, ಸಾಲಗಾರನು ವೈಯಕ್ತಿಕ ಸಾಲಕ್ಕೆ ಸಂಬಂಧಿಸಿದಂತೆ ನೀಡಿದ ಎಲ್ಲಾ ಅಥವಾ ಯಾವುದೇ ದಾಖಲೆಗಳನ್ನು ವಾಪಾಸ್ ಮಾಡುವುದಿಲ್ಲ.

5) 12 ರಿಂದ 60 ತಿಂಗಳ ನಡುವೆ ಯಾವುದೇ ಸಂದರ್ಭದಲ್ಲಿ, ಬ್ಯಾಂಕಿಗೆ ಕನಿಷ್ಠ 21 ದಿನಗಳ ಲಿಖಿತ ನೋಟೀಸ್ ನೀಡಿ ಮತ್ತು ಈ ಕೆಳಗಿನವುಗಳಲ್ಲಿ ಪಾವತಿಸಿ ಇಡೀ ವೈಯಕ್ತಿಕ ಸಾಲವನ್ನು ಸಾಲಗಾರನು ಬ್ಯಾಂಕಿಗೆ ಪಾವತಿಸಬಹುದು:

   a. ಬಾಕಿ ಇರುವ ವೈಯಕ್ತಿಕ ಸಾಲದ ಅಸಲು ಮೊತ್ತ; ಮತ್ತು

   b. ಬಾಕಿ ಇರುವ ವೈಯಕ್ತಿಕ ಸಾಲದ ಅಸಲು ಮೊತ್ತ; ಮತ್ತು

   c. ಶುಲ್ಕಗಳ ಅನುಸೂಚಿಯಲ್ಲಿ ಉಲ್ಲೇಖಿಸಿದ ದರಗಳಲ್ಲಿ ಮರುಪಾವತಿ ಶುಲ್ಕಗಳು ಬ್ಯಾಂಕಿನ ವೆಬ್ ಸೈಟ್ https://www.sc.com/ in/deposits/ schedule-of-charges/ ➔ Personal Loan ಟಬ್ಬನಲ್ಲಿ ಲಭ್ಯ.

   d. ಬ್ಯಾಂಕು ಲಿಖಿತವಾಗಿ ಸಂವಹನ ಮಾಡದ ಹೊರತು, ಸಾಲದ 12 ತಿಂಗಳುಗಳನ್ನು ಪೂರ್ಣಗೊಳಿಸಿದ ನಂತರ.

6) ಸಾಲಗಾರನಿಗೆ ವೈಯಕ್ತಿಕ ಸಾಲವನ್ನು ಮಂಜೂರು ಮಾಡುವ ಉದ್ದೇಶದಿಂದ, ಬ್ಯಾಂಕಿನ ಜೊತೆಗೆ ಖಾತೆಯನ್ನು ತೆರೆಯುವಾಗ, ಅಥವಾ ಬ್ಯಾಂಕಿನಿಂದ ಇತರ ಯಾವುದೇ ಉತ್ಪನ್ನ ಅಥವಾ ಸೇವೆಯನ್ನು ಪಡೆಯುವಾಗ, ಸಾಲಗಾರನು ನೀಡಿದ ಮಾಹಿತಿಯನ್ನು ಬ್ಯಾಂಕು ನೆಚ್ಚಿಕೊಂಡಿರುತ್ತದೆ ಹಾಗೂ ಬಳಸುತ್ತದೆ. ಬ್ಯಾಂಕಿನ ಜೊತೆ ಇರುವ ಸಾಲಗಾರನ ಮಾಹಿತಿ ಸರಿಯಾಗಿದೆ, ಸಂಪೂರ್ಣವಾಗಿದೆ ಮತ್ತು ಪರಿಷ್ಕೃತಗೊಂಡಿದೆ ಎಂಬುದನ್ನು ಸಾಲಗಾರನು ಖಚಿತಪಡಿಸಿಕೊಳ್ಳಬೇಕು. ಸಾಲಗಾರನು ನೀಡಿದ ಯಾವುದೇ ಮಾಹಿತಿಯು ಬದಲಾದಲ್ಲಿ, 30 ಕ್ಯಾಲೆಂಡರ್ ದಿನಗಳೊಳಗೆ ಸಾಲಗಾರನು ಬ್ಯಾಂಕಿಗೆ ತಿಳಿಸಬೇಕು. ಸ್ಥಳಾಂತರ ಅಥವಾ ಬೇರೆ ಯಾವುದೇ ಕಾರಣಕ್ಕಾಗಿ ವಿಳಾಸವು ಬದಲಾದ ಸಂದರ್ಭದಲ್ಲಿ, ಇಂತಹ ಬದಲಾವಣೆ ಉಂಟಾದ ಎರಡು ವಾರಗಳೊಳಗೆ ಹೊಸ ವಿಳಾಸವನ್ನು ಸಾಲಗಾರನು ಬ್ಯಾಂಕಿಗೆ ತಿಳಿಸಬೇಕು.

7) ಅನ್ವಯವಾಗುವ ಸ್ಥಳೀಯ ನಿಯಮಗಳಿಗೆ ಒಳಪಟ್ಟು, ನಿಯಂತ್ರಕರ ಅಥವಾ ಅಧಿಕಾರಿಗಳ ಅಥವಾ ಇಲ್ಲದಿದ್ದರೆ ಆದೇಶಗಳು, ಒಪ್ಪಂದಗಳಿಗೆ ಸಂಬಂಧಿಸಿದಂತೆ ಯಾವುದೇ ನ್ಯಾಯವ್ಯಾಪ್ತಿಯಲ್ಲಿ ಸಾಲಗಾರನ ತೆರಿಗೆ ಹೊಣೆಗಾರಿಕೆಯನ್ನು ಸಾಬೀತುಪಡಿಸಲು ಅಗತ್ಯವಿರುವೆಡೆ, ದೇಶೀಯ ಅಥವಾ ವಿದೇಶಿ ನಿಯಂತ್ರಕರು ಅಥವಾ ತೆರಿಗೆ ಅಧಿಕಾರಿಗಳೊಂದಿಗೆ ಬ್ಯಾಂಕು ಅಥವಾ ಇದರ ಯಾವುದೇ ಸಹಸಂಸ್ಥೆಗಳು (ಶಾಖೆಗಳು ಸೇರಿದಂತೆ) ಸಾಲಗಾರನ ಮಾಹಿತಿಯನ್ನು ಹಂಚಿಕೊಳ್ಳಬಹುದು.

8) ಪ್ರಾಧಿಕಾರದ ಪ್ರಕಾರ ಹಾಗೆ ಮಾಡಬೇಕಾದಲ್ಲಿ, ಅಥವಾ ಇಲ್ಲದಿದ್ದರೆ ಕಾನೂನಿನ ಪ್ರಕಾರ ಹಾಗೆ ಮಾಡಬೇಕಾದರೆ, ಅಥವಾ ಹೀಗೆ ಮಾಡಲು ಯಾವುದೇ ನಿಯಂತ್ರಕ ಅಥವಾ ಯಾವುದೇ ಪ್ರಾಧಿಕಾರದೊಂದಿಗಿನ ಒಪ್ಪಂದಕ್ಕೆ ಅನುಗುಣವಾಗಿ ಅಥವಾ ಪ್ರಾಧಿಕಾರದ ಅನ್ವಯ ಆದೇಶ ಅಥವಾ ನಿರ್ಬಂಧಕ್ಕೆ ಸಂಬಂಧಿಸಿದ ಅಂತರಿಕ ನೀತಿಗಳಿಗೆ ಅನುಗುಣವಾಗಿ ಬ್ಯಾಂಕು ಹಾಗೆ ಮಾಡಬೇಕಾದರೆ, ಬ್ಯಾಂಕು ಯಾವುದೇ ಸಂದರ್ಭದಲ್ಲಿ ವೈಯಕ್ತಿಕ ಸಾಲ ಖಾತೆಯನ್ನು ನಿರ್ಬಂಧಿಸಬಹುದು (ಮತ್ತು ನಂತರ ನಿರ್ಬಂಧವನ್ನು ತೆಗೆಯಬಹುದು).

9) ಇ.ಎಂ.ಐ. ಮನ್ನಾ/ ಕ್ಯಾಶ್ ಬ್ಯಾಕ್ ಯೋಜನೆ – ಒಂದು ವೇಳೆ ಸಾಲಗಾರನು ಇ.ಎಂ.ಐ ಮನ್ನಾ/ ಕ್ಯಾಶ್ ಬ್ಯಾಕ್ ಯೋಜನೆಯನ್ನು ಆರಿಸಿಕೊಂಡಿದ್ದಲ್ಲಿ ಸಾಲದ ಸಂಪೂರ್ಣ ಅವಧಿಯಲ್ಲಿ ಯಾವುದೇ ಕಾರಣದಲ್ಲಿ ಇ.ಎಂ.ಐ. ಬೌನ್ಸ್ ಅಥವಾ ಪಾವತಿಲೋಪ ಅಥವಾ ಇ.ಎಂ.ಐ ಪಾವತಿಯಲ್ಲಿ ವಿಳಂಬದಂತಹ ಯಾವುದೇ ಘಟನೆ ನಡೆಯದೆ ಇದ್ದಲ್ಲಿ ಮಾತ್ರವೇ ಸಾಲಗಾರನು ಕೊನೆಯ ಇ.ಎಂ.ಐ ಮನ್ನಾ/ ಕ್ಯಾಶ್ ಬ್ಯಾಕ್ ಯೋಜನೆಗೆ ಅರ್ಹನಾಗಿರುತ್ತಾನೆ. ಸಾಲಗಾರನು ಸಾಲದ ಸಂಪೂರ್ಣ ಅವಧಿಯನ್ನು ಪೂರ್ಣಗೊಳಿಸಿದ್ದಲ್ಲಿ ಮತ್ತು ಸಾಲದ ಅವಧಿ ಪೂರ್ವ ಮುಚ್ಚುಗಡೆ ಪ್ರಕರಣದಲ್ಲಿ ಸ್ಥಗಿತಗೊಳಿಸಿದ ಪ್ರಕರಣದಲ್ಲಿ ಕೊನೆಯ ಇ.ಎಂ.ಐ. ಮನ್ನಾ ಕೊಡುಗೆಯು ಅನ್ವಯವಾಗುತ್ತದೆ. ಬ್ಯಾಂಕಿನ ನಿರ್ಧಾರವು ಅಂತಿಮವಾಗಿರುತ್ತದೆ ಹಾಗೂ ಗ್ರಾಹಕರು ಇದಕ್ಕೆ ಬದ್ಧರಾಗಿರಬೇಕು. ಯಾವುದೇ ಕಾರಣವನ್ನು ನೀಡದೆಯೇ ಇ.ಎಂ.ಐ. ಮನ್ನಾ/ ಕ್ಯಾಶ್ ಬ್ಯಾಕ್ ಯೋಜನೆಯನ್ನು ಬ್ಯಾಂಕು ಯಾವುದೇ ಸಂದರ್ಭದಲ್ಲಿಯೂ ಸ್ಥಗಿತಗೊಳಿಸಬಹುದು ಅಥವಾ ಹಿಂದಕ್ಕೆ ಪಡೆಯಬಹುದು. ಬ್ಯಾಂಕಿನ ಸ್ವಂತ ವಿವೇಚನೆಯ ಮೇರೆಗೆ ಮತ್ತು ಬ್ಯಾಂಕು ಕಾಲದಿಂದ ಕಾಲಕ್ಕೆ ನಿಗದಿಗೊಳಿಸಿದ ನಿಯಮಗಳು ಮತ್ತು ಷರತ್ತುಗಳಿಗೆ ಒಳಪಟ್ಟು ಇ.ಎಂ.ಐ ಮನ್ನಾ/ ಕ್ಯಾಶ್ ಬ್ಯಾಕ್ ಯೋಜನೆಯನ್ನು ಬ್ಯಾಂಕು ಪ್ರಕ್ರಿಯೆಗೊಳಿಸಬಹುದು.

10) ಸಾಲಗಾರನು ವೈಯಕ್ತಿಕ ಸಾಲವನ್ನು ಕಡ್ಡಾಯವಾಗಿ ಅರ್ಜಿಯಲ್ಲಿ ಉಲ್ಲೇಖಿಸಿದ ದಾಖಲಿತ ವಿಷಯಕ್ಕಾಗಿ ಬಳಸುತ್ತಾರೆಯೇ ಹೊರತು ಯಾವುದೇ ಊಹಾತ್ಮಕ ಅಥವಾ ಸಮಾಜವಿರೋಧಿ ಚಟುವಟಿಕೆಗಳಿಗೆ ಅಲ್ಲ. ವೈಯಕ್ತಿಕ ಸಾಲವನ್ನು ತಿಳಿಸಲಾದ ಉದ್ದೇಶಕ್ಕೆ ಬಳಸಲಾಗುತ್ತಿಲ್ಲ ಎಂದು ಬ್ಯಾಂಕು ಅಭಿಪ್ರಾಯಪಟ್ಟರೆ, ಅದನ್ನು ಬ್ಯಾಂಕು ಹಿಂದಕ್ಕೆ ಪಡೆಯಬಹುದು.

11) ಸಾಲಗಾರನು ಬ್ಯಾಂಕಿನ ಯಾವುದೇ ನಿರ್ದೇಶಕರು ಮತ್ತು ಹಿರಿಯ ಅಧಿಕಾರಿಗಳಿಗೆ ಸಂಬಂಧಿಯಲ್ಲ, ಅಥವಾ ಭಾರತದ ಯಾವುದೇ ಇತರ ಬ್ಯಾಂಕುಗಳ ಯಾವುದೇ ನಿರ್ದೇಶಕನಿಗೆ ಸಂಬಂಧಿಯಲ್ಲ.

12) ಒಂದು ವೇಳೆ ಹೀಗೆ ಅಲ್ಲದೆ ಇದ್ದರೆ, ಇದರ ಕುರಿತು ದಯವಿಟ್ಟು ಬ್ಯಾಂಕಿಗೆ ಪ್ರತಿನಿಧಿಗೆ ತಿಳಿಸಿ. ಸಾಲಗಾರನಿಗೆ ನೀಡಲಾದ ಸಾಲ ಸೌಲಭ್ಯಗಳ ಮಾಸಿಕ ವಿವರಗಳನ್ನು ಕ್ರೆಡಿಟ್ ಇನ್ಫರ್ಮೇಶನ್ ಕಂಪನಿಗಳಿಗೆ (ಸಿ.ಐ.ಸಿ.) ನೀಡಲು ಬ್ಯಾಂಕಿಗೆ ಸಾಲಗಾರನು ಅನುಮತಿಸುತ್ತಾನೆ. ಅಂತಹ ವಿವರಗಳು, ಬ್ಯಾಂಕಿಗೆ ಸಾಲಗಾರನು ಪಾವತಿಸಲು ಬಾಕಿ ಇರುವ ಮೊತ್ತ (ಒಂದು ವೇಳೆ ಬಾಕಿ ಇರುವ ಮೊತ್ತದ ಕುರಿತು ಸಾಲಗಾರನು ತಗಾದೆಯನ್ನು ಹೊಂದಿದ್ದರೂ ಅಥವಾ ಬಾಕಿ ಇರುವ ಮೊತ್ತವನ್ನು ವಿಲೇವಾರಿ ಮಾಡಲು ಬ್ಯಾಂಕಿನ ಜೊತೆಗೆ ಒಪ್ಪಂದ ಮಾಡಿಕೊಂಡಿದ್ದರೂ) ಮತ್ತು ಸಾಲಗಾರನ ಮರುಪಾವತಿ ಇತಿಹಾಸವನ್ನು ಒಳಗೊಂಡಿರುತ್ತವೆ. ಇತರ ಹಣಕಾಸು ಸಂಸ್ಥೆಗಳು ಸಾಲಗಾರನಿಗೆ ನೀಡಿರುವ ಸಾಲ ಸೌಲಭ್ಯಗಳ ವಿವರಗಳನ್ನು ಬ್ಯಾಂಕು ಸಿ.ಐ.ಸಿ. ಯಿಂದ ಪಡೆಯಬಹುದು. ಬ್ಯಾಂಕು ಸಾಲಗಾರನಿಗೆ ಹೆಚ್ಚುವರಿ ಸಾಲ ಸೌಲಭ್ಯವನ್ನು ನೀಡಬಹುದೇ ಎಂಬುದನ್ನು ನಿರ್ಧರಿಸಲು ಬ್ಯಾಂಕು ಅಂತಹ ಮಾಹಿತಿಯನ್ನು ಬಳಸಿಕೊಳ್ಳಬಹುದು. ಸಾಲಗಾರನ ಖಾತೆಯನ್ನು ಖಾಯಂಗೊಳಿಸಿದ ನಂತರ, ಬ್ಯಾಂಕು ಸಿ.ಐ.ಸಿ. ಯಲ್ಲಿ ಪರಿಷ್ಕರಿಸುತ್ತದೆ. ಬ್ಯಾಂಕಿಗೆ ನೀಡಿದ ಯಾವುದೇ ಮಾಹಿತಿ ಅಥವಾ ಆತನ ಸಾಲದ ಸ್ಥಿತಿಗತಿಯ ಕುರಿತು ಬ್ಯಾಂಕು ಸೂಕ್ತವೆಂದು ಪರಿಗಣಿಸುವ ಯಾವುದೇ ವ್ಯಕ್ತಿಯ ಮೂಲಕ (ಪ್ರಾಧಿಕಾರ ಅಥವಾ ಕ್ರೆಡಿಟ್ ರೆಫರೆನ್ಸ್ ಏಜೆನ್ಸಿ ಅಥವಾ ಕ್ರೆಡಿಟ್ ಬ್ಯೂರೋ) ಪರಿಶೀಲಿಸಲು ಸಾಲಗಾರನು ಬ್ಯಾಂಕಿಗೆ ಅಧಿಕಾರ ನೀಡುತ್ತಾನೆ.

ಸಾಲದ ಅರ್ಜಿ (ಡೇಟಾ ಪ್ರೊಸೆಸಿಂಗ್ ಸೇರಿದಂತೆ) ಅಥವಾ ವೈಯಕ್ತಿಕ ಸಾಲದ ಉತ್ಪನ್ನದ ಗುಣಲಕ್ಷಣಗಳಿಗೆ ಸಂಬಂಧಿಸಿದಂತೆ, ಯಾವುದೇ ಸೇವೆಯನ್ನು ಒದಗಿಸುವ ಉದ್ದೇಶಕ್ಕಾಗಿ, ಯಾವುದೇ ಸೇವಾ ಪೂರೈಕೆದಾರರಿಗೆ (ಭಾರತದ ಒಳಗಿರಲಿ ಅಥವಾ ಹೊರಗಿರಲಿ), ಈ ಅರ್ಜಿಗೆ ಸಂಬಂಧಿಸಿದಂತೆ (ವೈಯಕ್ತಿಕ ಮಾಹಿತಿ ಸೇರಿದಂತೆ) ಯಾವುದೇ ಮಾಹಿತಿಯನ್ನು ಬ್ಯಾಂಕು ನೀಡಬಹುದು ಎಂಬುದನ್ನು ದೃಢೀಕರಿಸುತ್ತಾನೆ ಮತ್ತು ಒಪ್ಪಿಕೊಳ್ಳುತ್ತಾನೆ ಹಾಗೂ ಯಾರ ಮೂಲಕ ಅರ್ಜಿದಾರನು ತಮ್ಮ ಅರ್ಜಿಯನ್ನು ಸಲ್ಲಿಸಿದ್ದಾನೋ ಆ ಸೇಲ್ಸ್ ಏಜೆಂಟ್ ಅಥವಾ ಸಂಸ್ಥೆಗೆ ಆತನ ಉತ್ಪನ್ನದ ಅರ್ಜಿಯ ಸ್ಥಿತಿಯನ್ನು ಬ್ಯಾಂಕು ಬಹಿರಂಗಗೊಳಿಸುತ್ತದೆ ಎಂದು ಅರಿತುಕೊಳ್ಳುತ್ತಾನೆ.

13) ಅನ್ವಯವಾಗುವ ಕಾನೂನು ಮತ್ತು ನ್ಯಾಯವ್ಯಾಪ್ತಿ. – ವೈಯಕ್ತಿಕ ಸಾಲಕ್ಕೆ ಭಾರತದ ಕಾನೂನುಗಳು ಅನ್ವಯವಾಗುತ್ತವೆ.

ವೈಯಕ್ತಿಕ ಸಾಲದಿಂದಾಗಿ ಅಥವಾ ಅದಕ್ಕೆ ಸಂಬಂಧಿಸಿದಂತೆ ಯಾವುದೇ ಕ್ಲೇಮುಗಳು ಮತ್ತು ವಿವಾದಗಳು ಉಂಟಾದಲ್ಲಿ, ಅವುಗಳನ್ನು ಮಧ್ಯಸ್ಥಿಕೆ ಮತ್ತು ರಾಜಿ ಕಾಯಿದೆ, 1996 ಮತ್ತು ತದನಂತರದ ಯಾವುದೇ ಶಾಸನಬದ್ಧ ತಿದ್ದುಪಡಿ, ಹೇಳಲಾದ ಕಾಯಿದೆಗೆ ಯಾವುದಾದರೂ ಉಂಟಾಗಿದ್ದಲ್ಲಿ, ಇದರ ನಿಬಂಧನೆಗಳಿಗೆ ಅನುಗುಣವಾಗಿ ಮಧ್ಯಸ್ಥಿಕೆಯ ಮೂಲಕ, ಹಾಗೂ ರಿಕವರಿ ಆಫ್ ಡೆಟ್ಸ್ ಡ್ಯೂ ಟು ಬ್ಯಾಂಕ್ಸ್ ಅಂಡ್ ಫಿನಾನ್ಶಿಯಲ್ ಆಕ್ಟ್ 1993 ಅಡಿಯಲ್ಲಿ ಸ್ಥಾಪಿಸಲಾದ ಸಾಲ ವಸೂಲಾತಿ ನ್ಯಾಯಾಧೀಕರಣದ ನ್ಯಾಯವ್ಯಾಪ್ತಿಯ ಅಡಿಯಲ್ಲಿ ಅಂತಹ ಕ್ಲೇಮು ಅಥವಾ ವಿವಾದವು ಬರುವ ಸಂದರ್ಭವನ್ನು ಹೊರತುಪಡಿಸಿ, ಬ್ಯಾಂಕು ನೇಮಿಸಿದ ಏಕಮಾತ್ರ ಮಧ್ಯಸ್ಥಿಕೆದಾರನ ಮೂಲಕ ವಿಲೇವಾರಿ ಮಾಡಬೇಕು. ನೀಡಲಾದ ಯಾವುದೇ ಮಧ್ಯಸ್ಥಿಕೆ ತೀರ್ಪು/ ನಿರ್ದೇಶನವು ಅಂತಿಮವಾಗಿದ್ದು, ಪಕ್ಷಗಳು ಇದಕ್ಕೆ ಬದ್ಧರಾಗಿರಬೇಕು. ಮಧ್ಯಸ್ಥಿಕೆಯ ಭಾಷೆಯು ಇಂಗ್ಲಿಷ್ ಆಗಿರುತ್ತದೆ ಹಾಗೂ ಅಂತಹ ಮಧ್ಯಸ್ಥಿಕೆಯ ಸ್ಥಳವು ಮುಂಬಯಿ ಆಗಿರುತ್ತದೆ.

14) ಅರ್ಜಿಗೆ ಸಂಬಂಧಿಸಿದಂತೆ ನೀವು ಬ್ಯಾಂಕಿಗೆ ನೀಡಿದ ಎಲ್ಲಾ/ ಯಾವುದೇ ಮಾಹಿತಿಯು ಸರಿಯಾಗಿದೆ, ಸಂಪೂರ್ಣವಾಗಿದೆ ಹಾಗೂ ತಪ್ಪು ದಾರಿಗೆ ಎಳೆಯುವುದಿಲ್ಲ ಎಂದು ಪ್ರತಿನಿಧಿಸುತ್ತೀರಿ ಮತ್ತು ಸಮರ್ಥಿಸುತ್ತೀರಿ. (ಒಂದು ವೇಳೆ ಹೀಗೆ ಅಲ್ಲದೆ ಇದ್ದರೆ ನೀವು ವೈಯಕ್ತಿಕವಾಗಿ ಜವಾಬ್ದಾರರು)